**ದಿಃ 11.11.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ: ಶ್ರೀ. ಡಿ.ಕೆ.ಕೆ. ವಕೀಲರಿಂದಃ-**

ನನ್ನ ಅಜ್ಜನಾದ ಲಕ್ಷ್ಮಯ್ಯನವರಿಗೆ ದಾವಾ ಸ್ವತ್ತು ಮಂಜೂರಾದ ಬಗ್ಗೆ ನನಗೆ ಗೊತ್ತಿಲ್ಲ. ಲಕ್ಷ್ಮಯ್ಯನವರಿಗೆ ಮಂಜೂರಾದ ಸ್ವತ್ತಿನ ಚೆಕ್ಕುಬಂದಿ ಏನು ಇತ್ತು ಎಂದು ನಾನು ತಿಳಿದುಕೊಂಡಿರುವುದಿಲ್ಲ. ನನ್ನ ತಾತ ಲಕ್ಷ್ಮಯ್ಯನವರಿಗೆ ಒಟ್ಟು ಆರು ಜನ ಮಕ್ಕಳಿರುತ್ತಾರೆ. ಅದರಲ್ಲಿ ನಾಲ್ಕು ಜನ ಗಂಡು ಮಕ್ಕಳು ಮತ್ತು ಇಬ್ಬರು ಹೆಣ್ಣು ಮಕ್ಕಳು. ಲಕ್ಷ್ಮಯ್ಯನವರ ಮಕ್ಕಳು ಅಂದರೆ ಹನುಮಂತಪ್ಪ, ಗೋವಿಂದಪ್ಪ, ತಿಮ್ಮಪ್ಪ, ಕೆಂಚಪ್ಪ, ಮಲ್ಲಮ್ಮ ಮತ್ತು ಕರಿಯಮ್ಮ ಆಗಿರುತ್ತಾರೆ. ನನ್ನ ಅಜ್ಜ ಲಕ್ಷ್ಮಯ್ಯನವರು ಬಹಳ ವರ್ಷಗಳ ಹಿಂದೆ ತೀರಿ ಹೋಗಿರುತ್ತಾರೆ. ಯಾವಾಗ ತೀರಿ ಹೋರುತ್ತಾರೆ ಎಂದು ನನಗೆ ಗೊತ್ತಿಲ್ಲ.

ನಾನು ಈಗ ಮೇಲೆ ಹೇಳಿದ ಲಕ್ಷ್ಮಯ್ಯನವರ ಮಕ್ಕಳ ಪೈಕಿ ಈಗ ಗೋವಿಂದಪ್ಪನವರು ಮಾತ್ರ ಬದುಕಿರುತ್ತಾರೆ. ಉಳಿದವರು ಈಗ ಮರಣ ಹೊಂದಿರುತ್ತಾರೆ. ನಿಪಿ.9 ರ ವಂಶವೃಕ್ಷವನ್ನು ನಾನೇ ಹೇಳಿ ಬರೆಸಿರುತ್ತೇನೆ ಎಂದರೆ ಸರಿ. ಸದರಿ ವಂಶವೃಕ್ಷದಲ್ಲಿ ಲಕ್ಷ್ಮಯ್ಯನವರ ಮಕ್ಕಳು ರಾಮಪ್ಪ ಮತ್ತು ಹನುಮಯ್ಯ ಎಂದು ನಮೂದಿಸಲಾಗಿರುತ್ತದೆ ಎಂದರೆ ಸರಿ. ನನ್ನ ಅಜ್ಜ ಲಕ್ಷ್ಮಯ್ಯನವರಿಗೆ ಸರ್ಕಾರದಿಂದ 07 ಎಕರೆ 19 ಗುಂಟೆ ಮಂಜೂರಾಗಿರುತ್ತದೆ. ಸಾಮಾನ್ಯವಾಗಿ ಸರ್ಕಾರದಿಂದ 04 ಎಕರೆವರೆಗೆ ಮಾತ್ರ ಜಮೀನು ಇಲ್ಲದವರಿಗೆ ಜಮೀನು ಮಂಜೂರು ಮಾಡುತ್ತಾರೆ ವಿನಃ ಹೆಚ್ಚಿಗೆ ಮಂಜೂರು ಮಾಡುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ.

ನನ್ನ ವಾದ ಪತ್ರದಲ್ಲಿ ದಾವಾ ಸ್ವತ್ತು ಸ್ವಾತಂತ್ರ್ಯ ಪೂರ್ವದಲ್ಲಿಯೇ ಮಂಜೂರಾಗಿತ್ತು ಎಂದು ನಾನು ತಿಳಿಸಿರುತ್ತೇನೆ ಎಂದರೆ ಸರಿ. ನಮ್ಮ ಸ್ವಾತಂತ್ರ್ಯ ಸಿಗುವಂತ ಪೂರ್ವದಲ್ಲಿ ಸರ್ಕಾರ ಯಾರಿಗೂ ಯಾವುದೇ ಜಮೀನನ್ನು ಮಂಜೂರು ಮಾಡುತ್ತಿರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ದಾವ ಸ್ವತ್ತಿನ ಚಕ್ಕುಬಂದಿ ಪೂರ್ವಕ್ಕೆ-ಹೆಬ್ಬಾಗಲರ ಹನುಮಣ್ಣನವರ ಜಮೀನು, ಪಶ್ಚಿಮಕ್ಕೆ-ಹುಚ್ಚಪ್ಪನವರ ಜಮೀನು, ಉತ್ತರಕ್ಕೆ-ರಾಜಪ್ಪನವರ ಜಮೀನು, ದಕ್ಷಿಣಕ್ಕೆ-ಮಲ್ಲಪ್ಪನವರ ಜಮೀನು ಬರುತ್ತದೆ.

**(ಮುಂದುವರೆದ ಪಾಟೀಸವಾಲಿಗೆ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು)**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ್ದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇ

ಸಹಿ/-
2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ:ದ:ನ್ಯಾ:ದಂ.,ರವರು ಕಡೂರು.